Borewell permission for
Umiya Woods

# ಕರ್ನಾಟಕ ಅಂತರ್ಜಲ ಪ್ರಾಧಿಕಾರ

ಸಂ: ಬೆಂ.ಜ.ಮಂ/ಪ್ರ.ಅ/ಉಮುಅ(ನಿ)–1/ 679 /2013–14 ದಿನಾಂಕ: 11/11/13

## ನಮೂನೆ–3 ಎ (6ನೇ ನಿಯಮ)

## ವಾಣಿಜ್ಯ (ಇತರೆ ಬಳಕೆಗಾಗಿ – ಮನೆ ಕಟ್ಟಡ ಕಟ್ಟಲು, ಕುಡಿಯಲು ಮಾತ್ರ) ಕೊಳವೆಬಾವಿ ಕೊರೆಯುವುದಕ್ಕಾಗಿ ಅನುಮತಿ

ಕ್ರ.ಸಂ. 4231 ಶ್ರೀಮತಿ/ಶ್ರೀ. ಮೆ.ಬೆಂಗಳೂರು ಗೋವಾ ಎಸ್ಟೇಟ್ಸ್ ಪ್ರೈ.ಲಿ., ವಿಳಾಸ ಸಂ. 1153/57/2, ಪಟ್ಟಂದೂರು ಅಗ್ರಹಾರ, ಬೆಂಗಳೂರು ಇವರಿಗೆ ಬೆಂಗಳೂರು ನಗರದ ಖಾತಾ/ಪಿ.ಐ.ಡಿ ನಂ. 809 ರಲ್ಲಿ ಈ ಮುಂದಿನ ಷರತ್ತುಗಳಿಗೊಳಪಟ್ಟು ಕೈಗಾರಿಕೆ / ವಾಣಿಜ್ಯ / ಮನರಂಜನೆ ಅಥವಾ ಇತರೆ ನೀರಿನ ಬಳಕೆಗಾಗಿ ನೀರನ್ನು ಪಡೆಯುವುದಕ್ಕಾಗಿ **900–950 ಅಡಿ** ಆಳದವರೆಗೆ ಕೊಳವೆಬಾವಿಯನ್ನು ಕೊರೆಯುವುದಕ್ಕಾಗಿ ಅನುಮತಿ ನೀಡಲಾಗಿದೆ.

1. ಬಾವಿ/ಕೊಳವೆಬಾವಿಯನ್ನು ಯಾವ ಉದ್ದೇಶಕ್ಕಾಗಿ ಕೋರಲಾಗಿದೆಯೋ ಅದನ್ನು ಹೊರತುಪಡಿಸಿ ಯಾವುದೇ ಉಪಯೋಗಕ್ಕಾಗಿ ನೀರನ್ನು ಪಡೆಯಲು ಅವುಗಳನ್ನು ಬಳಸತಕ್ಕದ್ದಲ್ಲ.
2. ನೀರು ವ್ಯರ್ಥವಾಗುವುದನ್ನು ತಪ್ಪಿಸಲು ನೀರು ತೆಗೆಯುವುದನ್ನು ಉತ್ತಮವಾಗಿ ನಿರ್ವಹಿಸತಕ್ಕದ್ದು.
3. ಬಳಸಿದ ನೀರನ್ನು ಪುನ : ಶುದ್ಧೀಕರಿಸತಕ್ಕದ್ದು ಮತ್ತು ಅಗತ್ಯ ಶುದ್ಧೀಕರಣದ ನಂತರ ಮರು ಬಳಕೆ ಮಾಡತಕ್ಕದ್ದು.
4. ಬಾವಿಯ ಹತ್ತಿರದಲ್ಲಿ ಮಳೆ ನೀರು ಸಂಗ್ರಹಣೆಗಾಗಿ ನಿರ್ಮಿತಿಗಳನ್ನು ನಿರ್ಮಾಣ ಮಾಡತಕ್ಕದ್ದು.
5. ಬಾವಿ/ಕೊಳವೆಬಾವಿಯಿಂದ ನೀರನ್ನು ಹೊರತೆಗೆಯುವ ಆಧಾರ ಮೇಲೆ ನೀರಿನ ಬಳಕೆಯು ಕಾಲಕಾಲಕ್ಕೆ ಜಾರಿಗೊಳಿಸಬಹುದಾದ ವಿನಿಯಮನಕ್ಕೆ ಒಳಪಟ್ಟಿರುತ್ತದೆ.
6. ಅಂತರ್ಜಲ ಸಂಪನ್ಮೂಲದ ಮಾಲಿನ್ಯವನ್ನು ತಡೆಗಟ್ಟತಕ್ಕದ್ದು.
7. ಜಲಮಾಪಕ ಅಳವಡಿಸಿಕೊಳ್ಳಬೇಕು ಮತ್ತು ಅಂತರ್ಜಲ ಹೊರತೆಗೆದ ಮೇಲೆ ದತ್ತಾಂಶಗಳನ್ನು ನಿರ್ವಹಿಸಬೇಕು.
8. ನಮೂನೆ–1ಸಿ (ನಿಯಮ 9)ರಲ್ಲಿ ಕೊಳವೆ ಬಾವಿ ಕೊರೆದ ಮಾಹಿತಿಯನ್ನು ತಪ್ಪದೇ ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಕಡ್ಡಾಯವಾಗಿ ಸಲ್ಲಿಸುವುದು.
9. ಕೊಳವೆ ಬಾವಿ ಕೊರೆಯುವ ಸಮಯದಲ್ಲಿ ಪರಿಸರ ಮಾಲಿನ್ಯ ತಡೆಯಲು ಧೂಳು ಬಾರದಂತೆ ತುಂತುರು ನೀರು ಹನಿ ವ್ಯವಸ್ಥೆ ಮಾಡತಕ್ಕದ್ದು. (Water Sprinkling System).
10. ನೀರಿನ ಹಾಗೂ ಒಳಚರಂಡಿ ಸಂಪರ್ಕಕ್ಕೆ ಅರ್ಜಿ ಸಲ್ಲಿಸುವಾಗ ಈ ಅನುಮತಿ ಪತ್ರದ ನಕಲನ್ನು ಲಗತ್ತಿಸತಕ್ಕದ್ದು.
11. ಕೊಳವೆ ಬಾವಿ ಕೊರೆಯುವಾಗ ಉತ್ಪತ್ತಿಯಾಗುವ ಸಿಲ್ಟ್ ಮತ್ತು ಸ್ಲರ್ರಿ ( silt & slurry)ಯನ್ನು ಮೋರಿಗಳಿಗೆ ಬಿಡಬಾರದು ಹಾಗೂ ಅದನ್ನು ತಕ್ಷಣ ಸ್ಥಳದಿಂದ ಕೊಳವೆ ಬಾವಿ ಕೊರೆಯುವ ಮಾಲೀಕರು ತೆರವುಗೊಳಿಸಬೇಕು.

11/11

**ಉಪಮುಖ್ಯ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ**
**ಕರ್ನಾಟಕ ಅಂತರ್ಜಲ ಪ್ರಾಧಿಕಾರ ಬೆಂಗಳೂರು ಉಪಸಮಿತಿ**
Deputy Chief Engineer (M)
BWSSB

ಗೆ,

ಶ್ರೀಮತಿ/ಶ್ರೀ. ಮೆ.ಬೆಂಗಳೂರು ಗೋವಾ ಎಸ್ಟೇಟ್ಸ್ ಪ್ರೈ.ಲಿ.,
1153/57/2, ಪಟ್ಟಂದೂರು ಅಗ್ರಹಾರ,
ಬೆಂಗಳೂರು